
ನಾನು ಹೌಹಾರಿದೆ. ಅಂಗೈಗೆ ಗೀಚಿ ನೋಡಿದೆ, ಬರೆಯಲಿಲ್ಲ. ಮೇಲ್ಮುಖವಾಗಿ ಹಿಡಿದು ಬರೆದಿದ್ದನ್ನು ಒಪ್ಪಿಕೊಂಡ. ನನಗೆ ಸಿಟ್ಟು ಬಂತು. ಅದೇನು ಸೀಸದ ಕಡ್ಡಿ-ಪೆನ್ಸಿಲ್ಲೇ ಸವೆದಾಗೆಲ್ಲ ಚೂಪುಗೊಳಿಸಿ ಬರೆಯುವುದಕ್ಕೆ.



ಆ ಮೂರ್ಖನಿಗೆ ಗೊತ್ತಿಲ್ಲ-ಫೌಂಟನ್ ಪೆನ್ನನ್ನು ತುದಿ ಮೇಲ್ಮುಖವಾಗಿ ಹಿಡಿದು ಬರೆದರೆ ಕ್ರಮೇಣ ಅದರ ಇಂಕು ಪ್ರವಹಿಸುವುದು ಕಟ್ ಆಗುತ್ತದೆಂದು. ನನ್ನೊಳಗೆ ನಾನೇ ಪೇಚಾಡಿಕೊಂಡೆ. ನನ್ನ ಭೋಳೇ ಸ್ವಭಾವದಿಂದಾಗಿ, ಅಪಾತ್ರರಿಗೆ ನೆರವಾಗಿ ಜೀವನದಲ್ಲಿ ಬಹಳಷ್ಟು ಕಳೆದುಕೊಂಡಿದ್ದೇನೆ. ನನ್ನ ಆ ಪೆನ್ನೊಳಗಿನ ತೊಂಬತ್ತು ರೂಪಾಯಿ ಬೆಲೆಬಾಳುವ ರೀಫಿಲ್ಲು ಕ್ಷಣಾರ್ಧದಲ್ಲಿ ಹಾಳಾಗಿತ್ತು. ಕೈ ಕೈ ಹಿಸುಕಿಕೊಂಡೆ. ಆ ಮೂರ್ಖನಿಗೆ ಫೌಂಟನ್ (ಕಾರಂಜಿ-ಜಲಪಾತ) ಎಂದರೇನೇ ಮೇಲಿಂದ ಕೆಳಕ್ಕೆ ಇಳಿಯುವ ನಿಸರ್ಗನಿಯಮವೆನ್ನುವ, ಅದರ ತಂತ್ರಜ್ಞಾನದ ಪಾಠ ಮಾಡಬೇಕೆನ್ನುವಷ್ಟರಲ್ಲಿ, ಅಲ್ಲಿಗೆ ಬಂದ ನಗರ ಸಾರಿಗೆ ಬಸ್ಸನ್ನೇರಿ ಓಡಿ ಹೋಗಿದ್ದನವ, ಬೇಕೂಫ. ಆಧುನಿಕ ನಾಗರಿಕ ಜಗತ್ತಿನ ಸರಕುಗಳೆಲ್ಲ ಅತ್ಯಂತ ನಾಜೂಕಿನವೇ ಸೈ. ಅವನ್ನು ಹುಷಾರಾಗಿ ಬಳಸಬೇಕು. ಇಲ್ಲದಿದ್ದರೆ ಕೆಲಸ ಕೆಡುತ್ತದೆ. ಇದು ಮನುಷ್ಯರಿಗೂ ಅನ್ವಯವಾಗತಕ್ಕ ಮಾತು. ಕವಯತ್ರಿ ಸಂಚಿಯ ಹೊನ್ನಮ್ಮನನ್ನು ಅನುಕರಿಸಿದಂತೆ-

ಪೆನ್ನಲ್ಲವೆ ನಮಗೆ ಅಕ್ಷರದೀಕ್ಷೆ ಕೊಟ್ಟ ತಂದೆ
ಪೆನ್ನಿನಿಂದಲೆ ಸಕಲ ಸಂಪದವು |
ಪೆನ್ನು ಕಂಡರದೇಕೆ ಮೂಗು ಮುರಿಯುವಿರೆಲೊ
ಕಣ್ಣು ಕಾಣದ ಮಾಬ್-ಐಲುಗಳಿರಾ||

ನಾನಾದರೂ ಏನು ಮಾಡಲಿ? ಓದುವ ಸುಖದಿಂದಲೇ ವಂಚಿತವಾದ ಇಂದಿನ ಆಧುನಿಕ ನಾಗರಿಕ ಜಗತ್ತಿನ ಮೊಬೈಲು ಹುಚ್ಚರ ನಡುವೆ ಬೆಕ್ಕಸ ಬೆರಗಾಗಿದ್ದೇನೆ-ಸಂತೆಯಲ್ಲಿ ನಿಂತ ಕಬೀರನಂತೆ! ಯಾಕೆಂದರೆ ಹೃದಯದ ಭಾಷೆ ಎಲ್ಲ ಕಾಲಕ್ಕೂ ಸಲ್ಲುವುದೆಂಬ ಕಾರಣಕ್ಕೆ. ಈಗಲೂ ಹೈದರಾಬಾದ್ ಕರ್ನಾಟಕ– ಕ್ಷಮಿಸಿ ‘ಕಲ್ಯಾಣ ಕರ್ನಾಟಕ’ ಪ್ರದೇಶದಲ್ಲಿ ಗಟ್ಟಿಯಾಗಿ ಬರೆಯುವ ಸಾಹಿತಿಯನ್ನು ‘ಅವನ ಲೇಖೀ ಭಾಳಾ ಚಲೋ ಅದ’ ಎಂದೇ ಶಹಬ್ಬಾಸ್ ನೀಡುತ್ತಾರೆ. ಅದು ಪೆನ್ನಿಗಿರುವ ತಾಕತ್ತು! ಚಾಟಿ ಬೀಸಿದಂತೆ ಚುರುಕು ಮುಟ್ಟಿಸುವ ಪತ್ರಕರ್ತನ ವರದಿಗಳಿಗೆ ‘ಅವನ ಲೇಖನಿ ಚೂಪಾಗಿದೆ-ಹರಿತವಾಗಿದೆ’ ಎಂದೇ ಮೆಚ್ಚಿಕೊಳ್ಳುವುದು ಲೋಕ, ಎಲ್ಲ ಕಾಲಕ್ಕೂ. ಪೆನ್ನು ಮಸೆಯಬೇಕು. ಮಸೆದಷ್ಟು ಅದು ಚೂಪಾಗುತ್ತದೆಂದು ಬರಹಗಾರರನ್ನು ಉದ್ದೇಶಿಸಿ ಹೇಳಿದ ರೂಪಕವದು! ಅದನ್ನೇ ಬಂಡಾಯ ಸಾಹಿತ್ಯ ಸಂಘಟನೆ ತನ್ನ ಘೋಷ ವಾಕ್ಯವಾಗಿ-‘ಖಡ್ಗವಾಗಲಿ ಕಾವ್ಯ, ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ’ ಎಂದು. ಅಂತೆಯೇ ಅನುದಿನವು ನನಗೆ ಈ ಪೆನ್ನೇ ನನ್ನ ಎದೆಯ ಕಿಸೆಯಲ್ಲಿ ಕೂತ-ಹೃದಯಕ್ಕೆ ಹತ್ತಿರವಾಗಿರುವ ಆಪ್ತಮಿತ್ರ! (ವಿ.ಟಿ.: ಅಂದ ಹಾಗೆ ‘ಒಡನಾಡಿ ಬೇಕೆಂದು ಮಿಡುಕಿಯೆ ಮಿಡುಕಿದೆನು, ಕಡೆಗೆ ನೀ ಬಂದೆನ್ನ ಮಿಡುಕ ಕಳೆದೆ’ ಎಂಬ ಹಾಡು ಬರೆದ ಧಾರವಾಡದ ‘ನಲ್ವಾಡುಗಳು’ ಖ್ಯಾತಿಯ ಕವಿ ಬೆಟಗೇರಿ ಕೃಷ್ಣಶರ್ಮ ಅವರು. ‘ಕಲಾವತಿ’ ಸಿನಿಮಾಕ್ಕೆಂದು (1964) ಬಳಸಿಕೊಂಡ ಅದನ್ನು ಹಾಡಿದವರು ಪದ್ಮಭೂಷಣ ಪುರಸ್ಕೃತ ಸುಮನಾ ಹೆಮ್ಮಾಡಿ ಒಂದು ಕಾಲದಲ್ಲಿ ಕರ್ನಾಟಕದ ಮೂಲದವರೆಂದು ಬೇರೆ ಹೇಳಬೇಕಾಗಿಲ್ಲ. (ನಂತರ ಅವರೇ ಸುಮನ್ ಕಲ್ಯಾಣಪುರ ಎಂದು ದೇಶದಾದ್ಯಂತ ಪ್ರಸಿದ್ಧರಾದರು.)

●